ಸಾಕ್ಷಿದಾರರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಡಿ.ಎನ್.ಎಂ ವಕೀಲರಿಂದಃ

ನನ್ನ ಸ್ವತ್ತಿನ ಪಶ್ಚಿಮ ದಿಕ್ಕಿಗೆ ರಸ್ತೆ ಇದ್ದು, ಅದರಲ್ಲಿ ಜಯಮ್ಮ ಕೋಂ ರಾಜಪ್ಪ ಇವರು ಮನೆಯನ್ನು ಕಟ್ಟಿರುವುದಾಗಿ ನನ್ನ ಎದುರುವಾದದಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ, ಸದರಿ ಮನೆಯು ರಾಜಣ್ಣನ ಮನೆಯಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ರಾಜಣ್ಣ ಮನೆಯೆಂದು ಗುರುತಿಸಿರುತ್ತಾರೆ. ಸದರಿ ಫೋಟೋವನ್ನು **ನಿ.ಪಿ-19** ಎಂದು ಗುರುತಿಸಲಾಯಿತು. ನಮ್ಮ ಮನೆಯ ಪೂರ್ವಕ್ಕೆ ಕದರಜ್ಜ ದಾಸಪ್ಪನವರ ಮನೆ ಇರುತ್ತದೆ ಎಂದು ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ, ಸದರಿ ಮನೆಯು ಕದರಜ್ಜ ದಾಸಪ್ಪನವರ ಮನೆ ಇರುತ್ತದೆ ಎಂದು ನುಡಿದಿದ್ದು, ಸದರಿ ಫೋಟೋವನ್ನು **ನಿ.ಪಿ-20** ಎಂದು ಗುರುತಿಸಲಾಯಿತು.

ದಾವಾ 1 ನೇ ಮತ್ತು 2 ನೇ ಸ್ವತ್ತು ವಾದಿಗೆ ಅವರ ತಂದೆ ತಾಯಿಯಿಂದ ಬಂದಿದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ದಿಃ05.07.1954 ರಲ್ಲಿ ನೊಂದಾಯಿತ ದಾನ ಪತ್ರದ ಮೂಲಕ ವಾದಿಯ ಅಜ್ಜನಾದ ತಿಮ್ಮಯ್ಯ ಇವರು ವಾದಿಯ ತಂದೆಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಹೌಸ್ ಲಿಸ್ಟ್ ರಿಜಿಸ್ಟರ್ ನಲ್ಲಿ ಪೂರ್ವಕ್ಕೆ ವಾದಿಯ ಮನೆ ಇರುತ್ತದೆ ಎಂದರೆ ಸರಿಯಲ್ಲ. ಕದರಜ್ಜ ದಾಸಪ್ಪನವರ ಮನೆ ಇರುತ್ತದೆ ಎಂದು ನುಡಿದಿರುತ್ತಾರೆ. ವಾದಿಯ ಮನೆಯ ಪಶ್ಚಿಮಕ್ಕೆ ಇರುವಂತಹ ಜಾಗಕ್ಕೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ, ಅದು ರಸ್ತೆಯಾಗಿರುತ್ತದೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ, ಸದರಿ ಫೋಟೋವನ್ನು **ನಿ.ಪಿ-21** ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ಪಂಚಾಯಿತಿ ದಾಖಲಾತಿಗಳನ್ನು ನೋಡಿರುವುದಿಲ್ಲ.

ಸಾಕ್ಷಿಗೆ ಮತ್ತೊಂದು ಫೋಟೋವನ್ನು ತೋರಿಸಲಾಗಿ, ಸದರಿ ಫೋಟೋದಲ್ಲಿ ಕದರಜ್ಜ ದಾಸಪ್ಪ ಮತ್ತು ಜಯಮ್ಮನವರ ಮನೆ ಇರುತ್ತದೆ ಎಂದರೆ ಸಾಕ್ಷಿಯು ಫೋಟೋಗಳನ್ನು ನೋಡಿ ಗುರುತಿಸಿದ್ದು **ನಿ.ಪಿ-22** ಎಂದು ಗುರುತಿಸಲಾಯಿತು.

ನನ್ನ ಮನೆಯ ಪಶ್ಚಿಮ ದಿಕ್ಕಿಗೆ ಕಟ್ಟಿದೆ ಎಂದು ಹೇಳಲಾದ ಜಯಮ್ಮ ಕೋಂ ರಾಜಣ್ಣ ಇವರ ಮನೆಯನ್ನು ರಸ್ತೆಯಲ್ಲಿ ಕಟ್ಟಿರುವುದಕ್ಕೆ ಸಂಬಂಧಿಸಿದಂತೆ ನಾನು ಪಂಚಾಯಿತಿಗೆ ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ. ಪ್ರತಿವಾದದಲ್ಲಿರುವಂತಹ ಸ್ವತ್ತು ನನ್ನ ತಂದೆಗೆ ಅವರ ಅಜ್ಜನಿಂದ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿರುವಂತಹ ಸ್ವತ್ತು ಅಸ್ತಿತ್ವದಲ್ಲಿಯೇ

ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಜಯಮ್ಮ ಕೋಂ ರಾಜಣ್ಣ ಇಬ್ಬರೂ ಸೇರಿ ದಾಖಲೆಗಳನ್ನು ಸೃಷ್ಠಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ-1, 2 ಮತ್ತು 15 ಈ ದಾಖಲೆಗಳನ್ನು ಗ್ರಾಮ ಪಂಚಾಯತಿಯವರೊಂದಿಗೆ ಷರಿಕ್ಕಾಗಿ ಸೃಷ್ಠಿಸಿಕೊಂಡು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ-1 ರ ಪ್ರಕಾರ ಪೂರ್ವ-ಪಶ್ಚಿಮಃ29 ಅಡಿಗಳು ಇರುತ್ತದೆ. ನಿ.ಡಿ-15 ರಲ್ಲಿ 30 ಅಡಿ ಇರುತ್ತದೆ. ಪಂಚಾಯಿತಿಯು ಬದಲಾವಣೆಯಾದಾಗ ಸ್ವತ್ತಿನ ಅಳತೆಯು ಸಹ ಬದಲಾಗಿರುತ್ತದೆ. ನನಗೆ ಸದರಿ ವಿಚಾರವು ವಾದಿಯು ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ ನಂತರ ಗಮನಕ್ಕೆ ಬಂದಿರುತ್ತದೆ. ಆ ಮೊದಲು ನಾನು ದಾಖಲಾತಿಗಳನ್ನು ನೋಡಿರುವುದಿಲ್ಲ. ಸದರಿ ವಿಚಾರವೂ ನಮ್ಮ ಗಮನಕ್ಕೆ ಬಂದ ತಕ್ಷಣ ನಾವು ಗ್ರಾಮ ಪಂಚಾಯಿತಿಗೆ ಅರ್ಜಿಯನ್ನು ನೀಡಿರುವುದಿಲ್ಲ. ಹೀಗೆ ಅರ್ಜಿ ನೀಡಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ದಿಃ05.01.1991 ಅಂದರೆ ನಿ.ಡಿ-15 ಇದರಂತೆ ಕರ ಆಕರಣೆ ರಿಜಿಸ್ಟರ್ ಮತ್ತು ಹೌಸ್ ಲಿಸ್ಟ್ ರಿಜಿಸ್ಟರ್ ಅನ್ನು ಪಡೆದುಕೊಂಡಿರುವುದಿಲ್ಲ. ನಿ.ಡಿ-1 ರ ಪ್ರಕಾರ ಪಶ್ಚಿಮಕ್ಕೆ 34 ವಿ.ಪಿ ರಸ್ತೆ ಎಂದು ಬರೆದಿರುತ್ತದೆ. ನಿ.ಡಿ-15 ರಲ್ಲಿ ಪಶ್ಚಿಮಕ್ಕೆ 14 ಅಡಿ ಇರುತ್ತದೆ ಎಂದರೆ ಸರಿ. ಇಲ್ಲಿಯೂ ಸಹ ಅಳತೆಯಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ನಾನೇ ಹಾಜರುಪಡಿಸಿರುವಂತಹ ನಿ.ಡಿ-1 ಮತ್ತು 15 ರಲ್ಲಿ ವ್ಯತ್ಯಾಸಗಳು ಕಾಣುತ್ತಿದೆ ಎಂದರೆ ಸರಿ. ಎದುರುವಾದದಲ್ಲಿ ನಾನು ಹೇಳಿರುವಂತಹ ಸ್ವತ್ತಿಗೆ ಸಂಬಂಧಿಸಿದಂತೆ 2018 ಕ್ಕಿಂತ ಪೂರ್ವದ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ನನ್ನ ತಂದೆಯೊಂದಿಗೆ ಷರಿಕ್ಕಾಗಿ ವಾದಿಗೆ ಸೇರಿದ ಖಾಲಿ ನಿವೇಶನವನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಎದುರುವಾದವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿರುವಂತಹ ಸ್ವತ್ತು ಅಸ್ತಿತ್ವದಲ್ಲಿ ಇರುವುದಿಲ್ಲ ಮತ್ತು ನಾವು ಅದನ್ನು ಅನುಭವಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವಂತಹ ದಾಖಲೆಗಳು 2018 ರ ನಂತರ ಸೃಷ್ಠಿಕೊಂಡಿರುವ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ. ನಿ.ಡಿ-1 ಇದು ನಮ್ಮ ಪೂರ್ವಿಕರಿಂದ ಬಂದಿರುವಂತಹ ಸ್ವತ್ತು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

<u>**ಮರು ವಿಚಾರಣೆಃ** ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.